ಸಾಲಿನಲ್ಲಿ 20 ಮಹಿಳೆಯರಿಗೆ ನೇಯ್ಗೆ ತರಬೇತಿ ನೀಡಲಾಗಿದೆ. ಈ ಯೋಜನೆಯು ಮುಕ್ತಾಯವಾಗಿರುವುದರಿಂದ ಮುಂದಿನ ತರಬೇತಿಗೆ ಅವಕಾಶವಿರುವುದಿಲ್ಲ. ಆದರೆ ತರಬೇತಿ ಹೊಂದಿದ 20 ಅಭ್ಯರ್ಥಿಗಳಿಗೆ ಅದೇ ಕೇಂದ್ರದಲ್ಲಿ ನೇಯ್ಗೆ ವೃತ್ತಿ ಮುಂದುವರಿಸಲು ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ದುಡಿಮೆ ಬಂಡವಾಳದ ಬಗ್ಗೆ ವ್ಯವಹರಿಸಲಾಗಿದೆ. ಈ ಹಣ ಬಿಡುಗಡೆಯಾದ ತಕ್ಷಣ ಈ ಫಲಾನುಭವಿಗಳನ್ನು ನೇಯ್ಗೆ ವಡತ್ತಿಯಲ್ಲಿ ಈ ಕೇಂದ್ರದಲ್ಲಿ ತೊಡಗಿಸಲಾಗುವುದು.

ಅ) ಕರ್ನಾಟಕ ಕ್ಷೇಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಅಭಿವೃದ್ಧಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

1. ಸಹಕಾರ ಕ್ಷೇತ್ರದಿಂದ ಹೊರಗುಳಿದ ಹಾಗು ಮಾಸ್ಟರ್ ವೀವರ್ಸ್‌ಗಳ ಬಳಿಯಲಿರುವ ಬಡ ನೇಕಾರರನ್ನು ಮುಕ್ತಗೊಳಿಸಿ, ನಿಗಮದ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡು ಉದ್ಯೋಗ ಕಲ್ಪಿಸುವುದು.

2. ಅಳವಡಿಸಿಕೊಂಡ ನೇಕಾರರಿಗೆ ಕಚ್ಚಾಮಾಲು, ಮಗ್ಗ ಮತ್ತು ಸಾಮಗ್ರಿ, ನೇಯ್ದ ಬಟ್ಟೆಗಳಿಗೆ ಯೋಗ್ಯ ಪರಿವರ್ತನಾ ಶುಲ್ಕ ನೀಡುವುದು ಹಾಗೂ ನೇಯ್ದ ಬಟ್ಟೆಗಳಿಗೆ ಮಾರುಕಟ್ಟೆ ಒದಗಿಸುವುದು.

3. ನೇಕಾರರ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಸರ್ಕಾರದ ಅನೇಕ ಯೋಜನೆಗಳಾದ (ಅ) ಮಿತವ್ಯಯ ನಿಧಿ, (ಆ) ಗುಂಪು ವಿಮಾ ಯೋಜನೆ, ಇ) ಆಶಾಜ್ಯೋತಿ ಯೋಜನೆ. (ಈ) ಆರೋಗ್ಯ ಬುತ್ತಿ ಯೋಜನೆ (ಉ) ಕೇಂದ್ರ ಪುರಸ್ಕೃತ ಕಾರ್ಯಾಗಾರ ಮತ್ತು ವಸತಿ ಹಾಗೂ ಕಾರ್ಯಾಗಾರ ಯೋಜನೆಗಳನ್ನು ಹಾಗೂ ನೇಕಾರರ ನೇಯ್ಗೆ ಕೌಶಲ್ಯ ಹೆಚ್ಚಿಸಲು ಅನೇಕ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ವಿಶ್ವ ಯೋಜನೆಯ ಮೂಲಕ ಒದಗಿಸಲಾಗುತ್ತಿದೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಗೆ ಮಂಜೂರಾತಿ ಯೋಜನೆಗಳು.

3374(4108) **ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣಾ (ಸದಲಗ) :—** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಜಮೀನುಗಳಿಗೆ ಏತ ನೀರಾವರಿ ಯೋಜನೆ ಅಡಿಯಲ್ಲಿ (ಗಂಗಾ ಕಲ್ಯಾಣ ಯೋಜನೆ) ಬೆಳಗಾವಿ ಜಿಲ್ಲೆಗೆ ಮಂಜೂರಾದ ಒಟ್ಟು ಯೋಜನೆಗಳೆಷ್ಟು ತಾಲ್ಲೂಕುವಾರು ಹಾಗೂ ಸದಲಗಾ ಕ್ಷೇತ್ರವಾರು ವಿವರ ನೀಡುವುದು.

ಅ) 1999-2000ನೇ ಸಾಲಿನಲ್ಲಿ ಏತ ನೀರಾವರಿ ಯೋಜನೆಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದರೂ ಕೂಡ ಮಂಜೂರು ಮಾಡದಿರಲು ಕಾರಣಗಳೇನು ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಣಕಾಸಿನ ಕೊರತೆ ಇದೆಯೆ ಹಣದ ಕೊರತೆ ಇಲ್ಲದಿದ್ದಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು ವಿವರಣೆ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಕಳೆದ 3 ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆಯಡಿ 43 ಏತ ನೀರಾವರಿ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ.

ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:

1)	ಚಿಕ್ಕೋಡಿ	31	ಘಟಕಗಳು
2)	ಗೋಕಾಕ್	3	ಘಟಕಗಳು
3)	ಅಥಣಿ	5	ಘಟಕಗಳು
4)	ರಾಯಭಾಗ್	4	ಘಟಕಗಳು
	ಒಟ್ಟು	43	ಘಟಕಗಳು

ಸದಲಗಾ ಕ್ಷೇತ್ರವಾರು ವಿವರ :—

ಸದಲಗಾ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ 26 ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

1)	1997-98	-	21
2)	1998-99	-	04
3)	1999-2000	-	01
			26

ಆ) 1999-2000ನೇ ಸಾಲಿನಲ್ಲಿ, ಏತ ನೀರಾವರಿ ಯೋಜನೆಯಡಿಯಲ್ಲಿ ಹಣದ ಲಭ್ಯವಿಲ್ಲದ ಕಾರಣ ಏತ ನೀರಾವರಿ ಯೋಜನೆಯಲ್ಲಿ ಯಾವುದೇ ಹೊಸ

ಪ್ರಸ್ತಾವನೆಗಳನ್ನು ಮಂಜೂರು ಮಾಡಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ 30.00 ಎಕರೆ ಜಮೀನು ಮಿತಿಯೊಳಗೆ ಬರುವ ಏತ ನೀರಾವರಿ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. 30.00 ಎಕರೆಗೆ ಮೇಲ್ಪಟ್ಟ ಪ್ರಸ್ತಾವನೆಗಳನ್ನು ಸಣ್ಣ ನೀರಾವರಿ ಇಲಾಖೆಗೆ ಕಳುಹಿಸಿಕೊಡಲಾಗಿದೆ.

ತುಂಗಭದ್ರ ನದಿ ಪಾತ್ರದಿಂದ ಅಕ್ರಮ ಮರಳು ಸಾಗಾಣಿಕೆ.

3375(4135) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಭದ್ರಾ ನದಿ ಪಾತ್ರದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಮರಳು ಸಾಗಾಣಿಕೆಗೆ ಸರ್ಕಾರದ ವತಿಯಿಂದ ಪರವಾನಿಗೆಯನ್ನು ನೀಡಲಾಗುತ್ತಿದೆಯೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಬಂದಿರುತ್ತದೆ.

ಆ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನಿಯೋಜಿಸಲ್ಪಟ್ಟ ತನಿಖಾ ತಂಡವು ಅಕ್ರಮ ಮರಳು ಸಾಗಾಣಿಕೆಯ ಪ್ರದೇಶಗಳನ್ನು ತಪಾಸಣೆ ನಡೆಸಿ, ಅಕ್ರಮ ಸಾಗಾಣಿಕೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಂಡು ಕಾನೂನು ರೀತ್ಯ ದಂಡವನ್ನು ವಸೂಲಿ ಮಾಡುವ ಕ್ರಮವನ್ನು ಕೈಗೊಂಡಿರುತ್ತದೆ.

ಇ) ದಿನಾಂಕ 16-10-2000 ರಿಂದ ಜಾರಿಗೆ ಬಂದಿರುವ ನಿಯಮದ ಪ್ರಕಾರ ಸಾದಾ ಮರಳಿನ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇ ಮಾಡಲು ಕ್ರಮ ತೆಗೆದುಕೊಂಡಿದೆ.